ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 78-85
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಕನ್ನಡ ತತ್ವಪದ ಸಾಹಿತ್ಯದಲ್ಲಿ ಸಾಮಾಜಿಕ ಮತ್ತು ಆಧ್ಯಾತ್ಮಿಕ ಆಯಾಮಗಳು

**ಸುಖಮುನಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***

*ತತ್ವಪದಕಾರರು ಬದುಕಿನ ನಿಜ ಸ್ಥಿತಿಗಳನ್ನು ಕಂಡು ಸಮಾಜದ ಕಟ್ಟ ಕಡೆಯ ಕಟ್ಟಳೆಗಳನ್ನು ಮೀರಿ ಬದುಕಿದವರಾಗಿದ್ದಾರೆ. ಇವರು ಸಾಮಾಜಿಕವಾಗಿ ಆಶಯ, ನಿಲುವು, ಧೋರಣೆಗಳಿಂದ ತಾತ್ವಿಕತೆಯನ್ನು ಕಟ್ಟಿ ಶೋಧನೆಗೈದವರು. ಸಾಮಾಜಿಕವಾಗಿ ಜನ ಸಮುದಾಯಗಳಲ್ಲಿ ಉದಾತ್ತ ವಿಚಾರ ಪರಂಪರೆಯನ್ನು ಬಿತ್ತಿ ಬೆಳೆದು ಸಮಾಜವು ಸಮುದಾಯಗಳ ಮೇಲೆ ಹೇಗೆ ಪ್ರಭಾವ ಬೀರಿದೆ ಮತ್ತು ಅದು ನಡೆಸಿಕೊಳ್ಳುವ ರೀತಿ ನೀತಿಗಳನ್ನು ಸಮಾಜದಲ್ಲಿದ್ದುಕೊಂಡು ಸಮಾಜಿಕವಾಗಿ ಪರಿವರ್ತನೆಯನ್ನು ತರಲು ಹಗಲಿರುಳು ಶ್ರಮಿಸಿದ್ದಾರೆ. ಜಾತಿ ಸಂಕೋಲೆಗಳಿಂದ ನರಳುವ ವ್ಯವಸ್ಥೆಯನ್ನು ತಾತ್ವಿಕವಾಗಿ ತತ್ವ ಪದಗಳ ಮೂಲಕ ವರ್ಗ ಬೇಧ, ವರ್ಣ ಬೇಧ, ಜಾತಿ ಬೇಧ, ಲಿಂಗ ಬೇಧ, ಪ್ರಾದೇಶಿಕ ಬೇಧ, ವಯಸ್ಸಿನ ಬೇಧಗಳನ್ನು ಕಿತ್ತೊಗೆದು ಸಮಾನತೆಯ ದಾರಿ ತೋರಿಸಲು ಶ್ರಮವಹಿಸಿ ಸದೃಢ ಸಮಾಜದ ಕಲ್ಪನೆಗೆ ದಾರಿ ದೀಪವಾದರು.*

***Keywords:*** *ಕನ್ನಡ ಸಾಹಿತ್ಯ, ತತ್ವಪದ, ಸಾಮಾಜಿಕ ನಿಲುವು, ಆಧ್ಯಾತ್ಮಕ ಆಯಾಮ.*

## ಪೀಠಿಕೆ

ಸಾಮಾಜಿಕ ಬದುಕಿನಲ್ಲಿ ಬಹುಮುಖಿ ಶೋಧನೆಗಳ ಮೂಲಕ ಭಿನ್ನ ಭಿನ್ನ ನೆಲೆಗಳಲ್ಲಿ ಅಳೆದು ತೂಗಿದ ಜನ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯನ್ನು ನಿರ್ಮಿಸಿದ ತತ್ವ ಪದಕಾರರ ವಿಚಾರಧಾರೆಗಳು ಇವತ್ತಿಗೂ ಪ್ರಸ್ತುತವಾಗಿವೆ. ಬದುಕಿನ ನಿಜ ಸ್ಥಿತಿಗಳನ್ನು ಶರಣರ ವಚನಗಳಂತೆ, ಹರಿದಾಸರ ಕೀರ್ತನೆಗಳಂತೆ, ಅನುಭಾವಿಗಳು ತಮ್ಮ ಅನುಭವಗಳನ್ನು ತತ್ವಪದಗಳ ಮೂಲಕ ಗ್ರಹಿಸಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನ ಕಲ್ಪಿಸಿ ಕೊಟ್ಟಿದ್ದಾರೆ. ಮೇಲಿನ ಮೂರು ಪ್ರಕಾರಗಳು ಜನ ಸಮುದಾಯಗಳ ಕುರಿತ ನಿಲುವುಗಳನ್ನು ಹೊಂದಿದ್ದರು. ಅದರ ಒಳ ಹೂರಣ ಆಧ್ಯಾತ್ಮವೇ ಆಗಿದೆ. ಆದರೆ ಅವರ ಧೋರಣೆಗಳು, ತಾಳಿದ ನಿಲುವುಗಳು ವಿಶಿಷ್ಟವಾಗಿವೆ. ಅವರು ಲೌಕಿಕ ಬದುಕಿನಿಂದ ಅಲೌಕಿಕ ಬದುಕಿನ ಮಾರ್ಗದೆಡೆಗೆ ಕರೆದೊಯ್ಯುವುದೇ ಆಧ್ಯಾತ್ಮಕ್ಕೆ ಎಂಬ ಅಂಶಗಳು ಗೋಚರಿಸುತ್ತವೆ.

## ಮೂಢನಂಬಿಕೆಯ ವಿರೋಧ

ಮೂಢನಂಬಿಕೆ ಸಮಾಜದ ದೊಡ್ಡ ಪಿಡುಗಾಗಿದ್ದು, ಸಮಾಜವನ್ನು ತಾಳಕ್ಕೆ ತಕ್ಕಂತೆ ಕುಣಿಸುತ್ತಿದೆ. ಇತ್ತ ಅನುಭಾವಿಗಳಿರುವುದೇ ಮೂಢನಂಬಿಕೆಯ ಸಮಾಜ ದಲ್ಲಿ ಯಾಕೆಂದರೆ ಪುರೋಹಿತಶಾಯಿ ವ್ಯವಸ್ಥೆ ಮೂಢನಂಬಿಕೆ ಪದ್ಧತಿಯನ್ನು ಬಲವಂತವಾಗಿ ಹೇರಿದ್ದರು. ಮೂಢ ನಂಬಿಕೆಯ ಬಗ್ಗೆ ವಿಪ್ಲವಿ ಅವರು "ಮನುಷ್ಯನಿಗೆ ನಂಬಿಕೆ ಇರಬೇಕು. ಆದರೆ ಮೂಢ ನಂಬಿಕೆ ಇರಬಾರದು. ತಿಳುವಳಿಕೆಯನ್ನಿಟ್ಟುಕೊಂಡು ನಂಬುವ ನಂಬಿಕೆ ಸಹಜವಾದ ನಂಬಿಕೆ.

***Please cite this article as:*** ಸುಖಮುನಿ. (2023). ಕನ್ನಡ ತತ್ವಪದ ಸಾಹಿತ್ಯದಲ್ಲಿ ಸಾಮಾಜಿಕ ಮತ್ತು ಆಧ್ಯಾತ್ಮಿಕ ಆಯಾಮಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್.* 2(2), 78–85.

ಮೌಢ್ಯತೆಯಿಂದ ನಂಬುವ ನಂಬಿಕೆ ಮೂಢ ನಂಬಿಕೆ."[1] ಎಂದು ಹೇಳುತ್ತಾರೆ. ಮೂಢನಂಬಿಕೆ ಪರಂಪರಾಗತವಾಗಿ ಬೆಳೆಯುವುದರಿಂದ ಅದು ಸಮಾಜದಲ್ಲಿ ಮಾರಕ ವಾಗುತ್ತದೆ. ಇದು ಮುಂದೆ ಹೆಮ್ಮರವಾಗಿ ಬೆಳೆದು ಇಡೀ ಸಾಮಾಜಿಕ ವ್ಯವಸ್ಥೆಯನ್ನು ಹಾಳು ಮಾಡುತ್ತದೆ.

ಸಮಾಜಿಕ ವ್ಯವಸ್ಥೆಯಲ್ಲಿ ಎಲ್ಲಿ ಅಸಮಾನತೆಗಳು ಕಾಣುತ್ತವೆಯೋ ಅಲ್ಲಿ ಮೌಢ್ಯ, ಕಂದಚಾರ, ಮೂಢನಂಬಿಕೆಯಂಥಹ ಅಂಶಗಳು ರಾರಾಜಿಸುತ್ತಿ ರುತ್ತವೆ. ಹಾಗಾಗಿ ತತ್ವಪದಕಾರರು ಮೂಢನಂಬಿಕೆಯ ಜೊತೆಗೆ ಪುರೋಹಿತಶಾಯಿ ವ್ಯವಸ್ಥೆಯನ್ನು ವಿರೋಧಿ ಸಿದರು.

*"ಗೂಗಿ ಹಳಿಯಲು ಭಾನು ತೇಜಕೆ ಕುಂದುಂಟೇ*
*ಯೋಗಿನಾಥ*
*ಶ್ವಾನ ಬೊಗಳಲು ಮಸ್ತಿ ಆನೆಗೆ ಕುಂದುಂಟೇ*
*ಯೋಗಿನಾಥ*
*ಜನವು ಹಳಿಯಲು ಕೊಡುವ ದಾತಗೆ ಕುಂದುಂಟೇ*
*ಯೋಗಿನಾಥ*
*ವಾನರ ಹಳಿಯಲು ವನಕೆ ಕುಂದುಂಟೇ*
*ಯೋಗಿನಾಥ*
*ಕುರಿಯ ಹಳಿಯಲು ಕಟ್ಟು ಕಹಿಯುಂಟೇ*
*ಯೋಗಿನಾಥ*
*ತೂರಿದ ಮಣ್ಣು ತಾ ಸೂರ್ಯಗೆ ಮುತ್ತಲುಂಟೆ*
*ಯೋಗಿನಾಥ"* [2]

ಗೂಗಿ ಕತ್ತೆಯ ಪ್ರತಿರೂಪ. ಸಮಾಜದ ನಂಬಿಕೆಯಿಂದ ಇದನ್ನು ದೂರವಿಟ್ಟಿದ್ದಾರೆ. ಮನುಷ್ಯನಿಗೆ ಕೆಟ್ಟದಾದರೆ ಸೂರ್ಯನಿಗೆ ಕೇಡಾಗಬಾರದೆಂದು ಗೂಗಿಯನ್ನು ಅಸ್ಪೃಶ್ಯತೆಯಿಂದ ನೋಡದೆ ಅದರ ಚಲನವಲನಗಳು, ಸ್ವಭಾವದಿಂದ ಸೂರ್ಯನ ಹೋಲಿಕೆಯ ಮುಖಾಂತರ ಗೂಗಿಗೆ ಒಂದು ಪವಿತ್ರ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ಮನುಷ್ಯ ಸ್ವಭಾವದಂತೆ ಆನೆಯು ಕೂಡಾ ಅಂಧಕಾರದ ಪ್ರಾಣಿಯೆಂದು ಆನೆಗಿಂತ ನಾಯಿಗೆ ಪ್ರಾಶಸ್ತ್ಯ ಕೊಡುತ್ತಾರೆ ಎಂದು ವಿಡಂಬನೆಯಲ್ಲಿ ಟೀಕಿಸಿರುವುದು ಕಾಣುತ್ತೇವೆ. ಇವರ ವಿಡಂಬನ ರೀತಿಗಳು ಸಮಾಜದಲ್ಲಿ ಹೊಸತನದ ಜೊತೆಗೆ ವೈಚಾರಿಕತೆಯನ್ನು ಬೆಳೆಸಲು ಪ್ರೇರಣೆಯಾಯಿತು.

ಸಮಾಜದಲ್ಲಿ ಜನರ ನಡುವೆ ಹೊಂದಾಣಿಕೆಯ ಭಾವವಿದ್ದರೂ ಅವರಲ್ಲಿ ಮೇಲು-ಕೀಳೆಂಬ ಭಾವನೆ ಇಂದಿಗೂ ಜೀವಂತವಾಗಿದೆ. ತತ್ವ ಪದಕಾರರು ಜಾತಿ, ಮತ, ಪಂಥ ಬೇಧಗಳನ್ನು ಕಿತ್ತೊಗೆದು ಸಾಮರಸ್ಯದ ಸಮಾಜ ನಿರ್ಮಿಸುವಲ್ಲಿ ಪಣ ತೊಟ್ಟು ನಿಂತಿರುವುದು ಬಹಳ ವಿಶೇಷವಾಗಿ ಕಾಣಿಸುತ್ತದೆ.

**ಭಾವೈಕ್ಯತೆಯ ಪ್ರತೀಕ ಆಚರಣೆ**

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಅಂತ್ಯಂತ ಶ್ರೇಷ್ಠ ಹಬ್ಬವೆಂದರೆ 'ಮೊಹರಂ ಹಬ್ಬ'. ಇದು ಮುಸ್ಲಿಂಮರ ಹಬ್ಬವಾದರೂ ಬೇರೆ ಬೇರೆ ಧರ್ಮದ ಜನ ಸಮುದಾಯಗಳು ಒಟ್ಟಿಗೆ ತಮ್ಮ ಹಬ್ಬವೆಂಬ ರೀತಿಯಲ್ಲಿ ಆಚರಿಸುತ್ತಿರುವುದು ಈ ಭಾಗದಲ್ಲಿ ಕಂಡು ಬರುತ್ತದೆ. ಇದು ಭಾವೈಕ್ಯದ ಪ್ರತೀಕವಾಗಿರುವ ಹಬ್ಬವಾಗಿದೆ. ಇಂತ ಧರ್ಮಾತೀತವಾದ ಹಬ್ಬವನ್ನು 'ಅಲಾಯಿ-ಅಲಾವಿ' ಎಂದು ಕರೆಯುತ್ತಾರೆ ಈ ಹಬ್ಬವನ್ನು ಅತ್ಯಂತ ಸಂಭ್ರಮ ಸಡಗರದಿಂದ ಯಾವ ಜಾತಿ ಬೇಧಗಳಿಲ್ಲದೇ ಒಟ್ಟಾಗಿ ಸೇರಿ ಸಹೋದರತ್ವದ ಭಾವದಿಂದ ಆಚರಿಸುತ್ತಾರೆ.

*"ಅಲಾಯಿ ಎಂಬುದು ಏನಿದು*
*ಯಾರ್‍ಯಾರಿಗೆ ಇದು ತಿಳಿದಲ್ಲಾ*
*ತಿಳಿದ ಮ್ಯಾಲ ಅವರುಳಿದಿಲ್ಲ*
*ಉಳಿದ ಮ್ಯಾಲ ಅವರುಳಿದಿಲ್ಲ*
*ಉಳಿದ ಮ್ಯಾಲ ಅವರುಳಿದಿಲ್ಲ"* [3]

ಈ ಮೇಲಿನ ಅನುಭಾವಿಕ ಪದವು ತುಂಬಾ ವಿಶೇಷವಾದ ಅರ್ಥವನ್ನು ಒಳಗೊಂಡಿದೆ. ಈ ಹಬ್ಬದ ವಿಶಿಷ್ಟ ಕುಣಿತವಾದ 'ಅಲಾಯಿ' ಅಥವಾ 'ಅಲಾವಿ'ಯನ್ನು ದೃಷ್ಟಿಯಲ್ಲಿಕೊಂಡು ಇದರ ಮರ್ಮದ ಕುರಿತು ವಿಭಿನ್ನ ಅರ್ಥ ಕಟ್ಟಿಕೊಟ್ಟಿದ್ದಾರೆ. ಅಲಾಯಿ ಹಬ್ಬವೆಂದರೆ ಅದರಲ್ಲೂ ಹೈದರಾಬಾದ್ ಕರ್ನಾಟಕದ 'ಮುದಗಲ್'ನ ಪಟ್ಟಣದಲ್ಲಿ ಬಹಳ

ವಿಶೇಷವಾಗಿ ಆಚರಿಸುತ್ತಾರೆ. ಇದನ್ನು ನೋಡುವುದೇ ಒಂದು ಸಡಗರ. ಇಲ್ಲಿ ಬೇಧ ಭಾವವಿರುವುದಿಲ್ಲ.

**ವೇಶ್ಯಾವಾಟಿಕೆ**

ವೇಶ್ಯಾವಾಟಿಕೆ ಸಮಾಜದ ಅನಿಷ್ಟ ಪದ್ದತಿಗಳಲ್ಲೊಂದಾಗಿದೆ. ಇದು ಅನಾದಿ ಕಾಲದಿಂದಲೂ ನಡೆದು ಬಂದಿದ್ದು, ಇದನ್ನು ಹೋಗಲಾಡಿಸುವಲ್ಲಿ ಅವತ್ತಿನಿಂದ ಇವತ್ತಿನವರೆಗೆ ಸಮಾಜ ಸುಧಾರಕರು, ವಚನಕಾರರು ಹಗಲಿರುಳು ಶ್ರಮಿಸಿದ್ದಾರೆ. ಇದನ್ನು ಶಿಶುನಾಳ ಶರೀಫ್ ರಂತೂ ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾರೆ.

*"ಮಕ್ಕಳ್ಹಡಿದ ಸೂಳಿಯ ಸಂಗ ಮಾಡಬಾರದು ಅವಳ*

*ಕಕ್ಕುಲತೆಯಿಂದ ಹೋಗಿ ಹೋಗಿ ಕೂಡಬಾರದು।*

*ವೇಶ್ಯೆಯ ಸುರತವ ಬಯಸಿ ಹೋಗಿ*

*ಹಾಸಿಗೆಯ ಮ್ಯಾಲ ಕೂಡ್ರಲಾಗಿ*

*ಕೂಸು ಅಳುವದೆಂದು ಎನ್ನ ಬಿಟ್ಟು ಪೋಗುತಾ ಬಹು ಲೇಸದಿಂದ ಮಲಿಯನೊಡ್ಡಿ ಹಾಲು ನೀಡುತಾ ಹೊನ್ನಿನ*

*ರಾಶಿ ಬಾ ಎಂದು ಮೋಹ ಮಾಡುತಾ*

*ಹೇಸಿ ಲವಡಿ ಹನ್ನೇರಡು ತಾಸು ಹೊತ್ತಗಳೆಯಲಾಗಿ*

*ಬ್ಯಾಸರಾಯಿತು ಮನಕೆ ಮುರ ವಿಲಾಸ ವೆಂಬೋದು ತೀರಲಿಲ್ಲ."* [4]

ಸಾಮಾಜಿಕವಾಗಿ ನಡೆಯುತ್ತಿರುವ ವೇಶ್ಯಾವಾಟಿಕೆ ಪದ್ದತಿ ಹೀನಾಯವಾದದ್ದು. ಇದನ್ನು ತತ್ವ ಪದಕಾರರು ವಿರೋಧಿಸಿದ್ದಾರೆ. ಒಂದೊತ್ತಿನ ಊಟ ಇಲ್ಲದಿದ್ದರೂ ಘನತೆ ಗೌರವ ಬಹು ಮುಖ್ಯವಾಗಿ ಬೇಕು. 'ಸೂಳೆ' ಎಂದರೆ ವೇಶ್ಯೆ. 'ಸೂಳೆಯ ಸಂಗ ಮಾನಭಂಗ' ಎನ್ನುವ ಹಾಗೆ ವೇಶ್ಯೆಯ ಸಂಗ ತರವಲ್ಲ ಎಂದು ಹೇಳುತ್ತಾರೆ. ಅದರಿಂದ ವ್ಯಕ್ತಿತ್ವಕ್ಕೆ ಮಾರಕವಾಗುತ್ತದೆ. ಅದರಲ್ಲೂ ಮಕ್ಕಳನ್ನು ಹಡೆದ ಸೂಳೆಯ ಸಂಗ ಮಾಡಲೇಬಾರದು ಎನ್ನುತ್ತಾರೆ. ಯಾಕೆಂದರೆ ಯಾರನ್ನು ಅವಳು ಆಸೆ ಪಟ್ಟು ಕೂಡಲಾರಳು. ಅವಳಿಗೆ ಚಿತ್ತ ಮಗುವಿನ ಕಡೆಗೂ ಹೋಗುವುದರಿಂದ ಚಿತ್ತ ಚಂಚಲವಾಗಿ ಪರಸ್ಪರ ಎರಡು ಮನಸ್ಸುಗಳು ಕೂಡಲು ಅನುವಾಗುತ್ತಿರುವಾಗ ಸುಖಭೋಗ ತೀರುವುದಿಲ್ಲ. ಇದನ್ನು ಕಂಡು ಬಹು ತೀಕ್ಷ್ಣವಾಗಿ ಜರಿದಿದ್ದಾರೆ.

ತತ್ವ ಪದಕಾರರು ಲೋಕ ಹಿತವನ್ನು ಬಯಸುವರಾಗಿರುವುದರಿಂದ ಸಮಾಜದ ವಿದ್ಯಮಾನಗಳನ್ನು ಕಂಡು ವಿಡಂಬಿಸುತ್ತಲೇ ಅವುಗಳ ಮೂಲಕ ತಮ್ಮ ಕಾಲ ಘಟ್ಟದ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಗೆ ಮುಖಾ ಮುಖಿಯಾಗಿದ್ದಾರೆ.

*"ಮಾನಗೇಡಿ ಮಂದಿ ಹುಟ್ಟಿ ಮರ್ತ್ಯ ಕೆಡಿಸ್ಯರೋ*

*ಊಡಾಳ ಮಂದಿ ಊರೊಳಗೆ ಹಿಡಿಯಲ್ಹೋದಾರೊ*

*ಪಥ್ಯ ಮಾಡೋ ಉತ್ತಮರೆಲ್ಲ ಎತ್ತ ಹೋದರೋ"* [5]

ಈ ಮೇಲಿನ ಕಡಕೋಳ ಮಡಿವಾಳಪ್ಪನ ನಿಷ್ಠುರದ ಮಾತು ಸಮಾಜವನ್ನು ಸರಿ ದಾರಿಗೆ ತರುವುದಾಗಿದೆ. ಇಲ್ಲಿ 'ಮಾನಗೇಡಿ ಮಂದಿ' ಸ್ವಾರ್ಥಿಗಳು, ಮಾನ ಮರ್ಯಾದೆಯಿಲ್ಲದವರು, ದುಷ್ಟರು, ಸಮಯ ಸಾಧಕರಾಗಿದ್ದಾರೆ. ಇವರು ಸಮಾಜದ ಎಲ್ಲ ಕಡೆಗಳಲ್ಲಿ ತುಂಬಿ ಹೋಗಿದ್ದಾರೆ. ಜನಕ್ಕೆ ಮತ್ತು ಮನಕ್ಕಂಜುವವರು ಅಲ್ಲವೇ ಅಲ್ಲ. ಇಂತವರಿಂದ ಸಮಾಜಕ್ಕೆ ದಕ್ಕೆ ಬಂದಿರುವಂತಹದ್ದು. ಅದಕ್ಕಾಗಿ ಮಡಿವಾಳಪ್ಪನವರು ಜವಾರಿ (ದೇಸಿ) ಭಾಷೆಯಿಂದಲೇ ಟೀಕಿಸುವುದು ಇವರ ಜಾಯಮಾನವಾಗಿತ್ತು.

**ಹೆಣ್ಣು- ಹೊನ್ನು- ಮಣ್ಣು**

ಮಾನವನು ಸಮಾಜ ಜೀವಿಯಾಗಿದ್ದಾನೆ. ಸಮಾಜದಲ್ಲಿ ಬಾಳಿ ಬದುಕಲು ಹಣ, ಬಂಗಾರ, ಅಂತಸ್ತು, ಭೂಮಿ ಬಯಸುವುದು ಸರ್ವೇ ಸಾಮಾನ್ಯ. ಇವುಗಳನ್ನು ಪಡೆಯಲು ಜೀವನದ ಶ್ರಮವೆಲ್ಲವನ್ನು ಹಾಕುತ್ತಾನೆ. ಜನಪದೀಯರು ಹೇಳುವ ಹಾಗೆ 'ಹೆಣ್ಣು–ಹೊನ್ನು–ಮಣ್ಣು' ಯಾವತ್ತೂ ನಂಬಬಾರದು ಎಂಬ ಮಾತಿನಂತೆ ಇದರಿಂದ ಹಿಂದೆ ಎಷ್ಟೋ ರಾಜರು, ಸಾಮ್ರಾಜ್ಯಗಳು ನಶಿಸಿ ಹೋಗಿದ್ದು ಇದನ್ನು ಮನಗಂಡು ಛಲವಾದಿ ಚಂದ್ರಪ್ಪ ಈ ಕೆಳಗಿನ ತತ್ವ ಪದದಲ್ಲಿ ತಿಳಿಸಿದ್ದಾನೆ.

*"ಏನ ಕೆಡಿಸಿಕೊಂಡೆಲ್ಲೊ ತಮ್ಮ ॥ಪ॥*
*ಪರರ ಸೊತ್ತಿಗೆ ನಂದದ ಕರ್ಮಾ*
*ನಿನ್ನೊಂಶಕ ಹತ್ತಿತೋ ಗೋಮಾ*
*ತಾಯಿ ಗಂಡರೊಳು ನಿನ್ನ ಜಮಾ*
*ಮಾಡಿಕೊಂಡನಾ ಯಮ ಧರ್ಮಾ ॥1॥*

*ಹೊನ್ನು ಹೆಣ್ಣಿನ ಧರ್ಮಾ*
*ಉಕ್ಕೇರುತ ಕಾಂಬುದು ಕಾಮಾ*
*ಸರ್ವಾಂಗ ಅಂತದ ಜುಮ್ಮ ಜುಮ್ಮ*
*ಮೋಹಗೊಂಡಿತವನ ರೋಮ ರೋಮಾ" ॥2॥* [6]

**ಸಾಮಾಜಿಕ ಆರೋಗ್ಯದ ದೃಷ್ಟಿ**

ತತ್ವ ಪದಕಾರರು ಸಹಜವಾಗಿ ಬದುಕನ್ನು ಗ್ರಹಿಸಿದ ರೀತಿ ಇವರು ಸಮುದಾಯಿಕವಾಗಿ ಬಹು ಜನ ಉದ್ಧಾರವೇ ಇವರ ದೃಷ್ಟಿಕೋನ. ಇವರ ದೃಷ್ಟಿಯಲ್ಲಿ ಸಾಮಾಜಿಕ ಜೀವನದ ಆರೋಗ್ಯದ ಜೊತೆಗೆ ದೇಹ ಮತ್ತು ಮನದ ಆರೋಗ್ಯಕ್ಕೂ ಕೂಡ ಗಮನವನ್ನು ಕೇಂದ್ರಿಕರಿಸಿದ್ದಾರೆ. ಆರೋಗ್ಯವೇ ಭಾಗ್ಯವೆಂಬಂತೆ ಆಯಸ್ಸು, ಆರೋಗ್ಯ ಸಿದ್ದಿಗಾಗಿ ಹಂಬಲಿಸಿದವರು.

*"ಆಕಳು ಗಿಣ್ಣು/ ಬಲು ಸವಿಯಣ್ಣಾ/ ಉಣ್ಣೋ ಬಸವಣ್ಣಾ*
*ಆ ಆ ಉಣ್ಣೋ ಬಸವಣ್ಣಾ/ ಕಾಶಿದ ಹಾಲು ಬೋನ*
*ಮೀಸಲು ಉಣ್ಣೋ ಬಸವಣ್ಣ/ ಕಲಸನ್ನಾ ಸಾರು*
*ಮೇಲೆ ಮೊಸರು/ ಮಜ್ಜಿಗೆ ನುಚ್ಚು ಎಲ್ಲಕ್ಕೂ ಹೆಚ್ಚು*
*ಉಣ್ಣೋ ಬಸವಣ್ಣ ಆ ಆ"* [7]

ಮಂದಕಲ್ ಭೀಮಲಿಂಗಪ್ಪ ಎಂಬ ಅನುಭಾವಿ ವೃತ್ತಿಯಲ್ಲಿ ರೈತನಾಗಿದ್ದನು. ರೈತಾಪಿ ಬದುಕಿನ ಜೊತೆಗೆ ದನ ಕರುಗಳನ್ನು ಪೋಷಿಸುತ್ತಿದ್ದನು. ಉತ್ಪಾದನಾ ಶೀಲ ಸಂಸ್ಕೃತಿಯ ಪ್ರತೀಕಗಳಾದ ಹಾಲು, ಮೊಸರು, ಅನ್ನ, ಆಕಳು, ಗಿಣ್ಣು, ಮಜ್ಜಿಗೆಗಳಾಗಿವೆ. ಉತ್ಪಾದನಾ ಸಮಾಜದ ನಿರಂತರ ವಿಕಾಸ ಕ್ರಮಗಳನ್ನು ತತ್ವ ಪದಕಾರರಲ್ಲಿ ಕಾಣುತ್ತೇವೆ. ಸಾಂಪ್ರದಾಯಿಕ ಸಮಾಜದಲ್ಲಿ ಆಧುನಿಕ ಅಂಶಗಳನ್ನು ಸೂಕ್ಷ್ಮ ರೀತಿಯಲ್ಲಿ ಅವುಗಳಿಂದಾಗುವ ಸಮಸ್ಯೆ, ಪರಿಣಾಮಗಳನ್ನು ಗಮನಿಸುತ್ತಾ ತಮ್ಮ ತತ್ವದಿಂದ ಅವುಗಳನ್ನು ಅಲ್ಲಗಳೆದು ಸಮಾಜದ ಮೇಲೆ ಹೇಗೆ ಪ್ರಭಾವ ಬೀರಿದೆ ಎಂಬುದನ್ನು ತಾತ್ವಿಕ ನುಡಿಗಳನ್ನು ಗ್ರಹಿಸುವುದರ ಮೂಲಕ ಭಿನ್ನ ನೆಲೆಗಳಲ್ಲಿ ಗ್ರಹಿಸಬಹುದಾಗಿದೆ.

ತತ್ವ ಪದಕಾರರು ತಮ್ಮ ಹಾಡುಗಳಲ್ಲಿ ಕೃಷಿಕರು, ಮಹಿಳೆಯರು, ಅಪಮಾನಕ್ಕೊಳಗಾದವರನ್ನು ಗುರುತಿಸಿದ್ದಾರೆ. ಶೋಷಣೆ ಮತ್ತು ದಬ್ಬಾಳಿಕೆಯ ವಿರುದ್ದ ಧ್ವನಿ ಎತ್ತಿದ್ದಾರೆ. ಪ್ರತಿಯೊಂದು ರಂಗದಲ್ಲೂ ಶೋಷಕರಾಗಿ ಗಣ್ಯರು, ವ್ಯವಹಾರಸ್ಥರು, ಜಮೀನುದಾರರು, ಪುರೋಹಿತರು, ಇತರ ಮೇಲ್ವರ್ಗದವರಿಂದ ಮಾನಸಿಕ ಮತ್ತು ಸಾಮಾಜಿಕವಾಗಿ ದರ್ಪದೌರ್ಜನ್ಯಗಳು ಕೊಲೆ, ಸುಲಿಗೆಗಳಂತಹ ವ್ಯವಸ್ಥೆಗಳಿಂದ ಇಡೀ ಸಾಮಾಜಿಕ ವ್ಯವಸ್ಥೆಯೇ ಅಲ್ಲೋಲ ಕಲ್ಲೋಲವಾಗಿತ್ತು. ವಸಾಹತು ಶಾಯಿ ವ್ಯವಸ್ಥೆಯೂ ಮಾನಸಿಕವಾಗಿ ಮತ್ತು ಭೌದ್ದಿಕವಾಗಿ ಜನ ಸಮುದಾಯಗಳನ್ನು ಅಂಗೈಯಲ್ಲಿಡಿದು ಹಾಡಿಸುತ್ತಿತ್ತು. ಅಲುಗಾಡಲು ಬರದೇ ಇರೋ ಸ್ಥಿತಿಗೆ ತಂದು ನಿಲ್ಲಿಸಿತ್ತು. ಅವತ್ತಿನ ಕಾಲದ ಒತ್ತಡಗಳಿಂದ ಜನ ಸಮುದಾಯಗಳು ಉಸಿರಾಡದೇ ಇರುವ ಪರಸ್ಥಿತಿ ನಿರ್ಮಿಸಿ ವೈದಿಕರು ದಬ್ಬಾಳಿಕೆಯಿಂದ ಧರ್ಮದ ನಿರ್ಬಂಧಗಳನ್ನು ಸಮಾಜದ ಮೇಲೆ ಹೇರಿದ್ದರು. ಅಂತಹ ಸಂದರ್ಭದಲ್ಲಿ ಅನುಭಾವಿಗಳು ಸಮಾಜದಲ್ಲಿ ಬದುಕುವ ರೀತಿ ನೀತಿಗಳನ್ನು ಐಕ್ಯತೆಯ ಅಂಶಗಳನ್ನು ರಚನೆಗಳ ಮೂಲಕ ಸಮಾಜದಲ್ಲಿ ಬಿತ್ತರಿಸುವ ಕಾರ್ಯ ಮಾಡಿದ್ದರು.

**ವರದಕ್ಷಿಣೆ**

ವರದಕ್ಷಿಣೆ ನಮ್ಮ ದೇಶದಲ್ಲಿ ದೊಡ್ಡ ಸಮಸ್ಯೆಯಾಗಿ ಇವತ್ತಿಗೂ ಸಾಮಾಜಿಕ ಬದುಕಿನಲ್ಲಿ ಭಯಾನಕ ಸಮಸ್ಯೆಯಾಗಿ ಕಾಡುತ್ತಿದೆ. ಬಡವರ ಬದುಕಿನ ಜೊತೆಗೆ ಆಟವಾಡುತ್ತಾ ಹೆಣ್ಣು ಮಕ್ಕಳ ಸಾವಿಗೂ ಕೂಡ ಕಾರಣೀಭೂತವಾಗಿದೆ. ಅವತ್ತಿನ ದಿನದಲ್ಲಿ ಸಾಮಾಜಿಕ ಜೀವನದ ಸಮಸ್ಯೆಗಳನ್ನು ಅರಿತ ತತ್ವ

ಪದಕಾರರು ವರದಕ್ಷಿಣೆಕೋರರನ್ನು ಕುರಿತು ಈ ಕೆಳಗಿನ ತತ್ವ ಪದದಲ್ಲಿ ಹೀಗೆ ಹೇಳಿದ್ದಾರೆ.

*"ತಿಳಿಯೋ ಜಾಣ ಎಂದಿಗೂ ಬೇಡಬಾರದೊ ವರದಕ್ಷಿಣಾ*

*ಕನ್ಯಾ ನೋಡಿ ಆಗಬೇಕು ಲಗ್ಗಣ ಕನ್ಯಾ ಇರಬೇಕು ಶುಭ ಲಕ್ಷಣ*

*ಅನ್ಯರ ಹೆಣ್ಣಿಗಿ ಕೈವಡಿ ಹಣದಾಸಿಗೆ ಬದ್ದಾಂಗನರ ಕೋಣ*

*ಹಣ ಇದ್ದವರು ಮಡತಾರ ಲಗಣ।*

*ಹಡದ ತಾಯಿ ತಂದಿ ಎದಿಯೊಳಗ ಹುಣ್ಣ"*[8]

ಈ ತಾತ್ವಿಕ ನುಡಿಯಲ್ಲಿ ಮದುವೆಯಾಗೋ ಗಂಡಿಗೆ ತಿಳಿ ಹೇಳುವ ಪ್ರಸಂಗದ ಮಾತು ಎಂದು ಗ್ರಹಿಸಬಹುದು. ವರದಕ್ಷಿಣೆ ರಾಕ್ಷಸಿ ಪ್ರವೃತ್ತಿಯಾಗಿದ್ದು, ಸಮಾಜವನ್ನು ತಾನು ಹೇಳಿದಂತೆ ಕೇಳಿಸುತ್ತಿದೆ. ಇದರಿಂದ ಎಷ್ಟೋ ಕುಟುಂಬಗಳು ಬೀದಿ ಪಾಲಾಗಿರುವುದರಿಂದ ಅದರ ಕಷ್ಟ ನಷ್ಟಗಳನ್ನು ಅರಿತು ವರದಕ್ಷಿಣೆ ತೆಗೆದುಕೊಳ್ಳುವುದು ಪಾಪ ಕೃತ್ಯವೆಂಬ ರೀತಿಯಲ್ಲಿ ಬಿಂಬಿಸಲಾಗಿದೆ. 'ಹಣಕ್ಕಿಂತ ಗುಣ ಮುಖ್ಯ'ವೆನ್ನುವ ಹಿರಿಯರ ಮಾತಿನಂತೆ ಗುಣವುಳ್ಳ ಒಳ್ಳೆಯ ಲಕ್ಷಣ ಹೊಂದಿದ ಹೆಣ್ಣನ್ನು ಮದುವೆ ಮಾಡಿಕೊಳ್ಳಬೇಕು ಎಂಬ ಮಾತು ಕುಂಟುಂಬ ಗೌರವಕ್ಕೆ ಅವರು ನೀಡುವ ಒಳ್ಳೆಯ ವಿಚಾರವೆಂದು ನನಗನಿಸುತ್ತದೆ. ಸಾಮಾಜಿಕ ಜೀವನದಲ್ಲಿ 'ಹೆಣ್ಣು ಬೆನ್ನಿಗೆ ಹುಣ್ಣು' ಎನ್ನುವ ಹಾಗೆ ಪ್ರತಿಯೊಬ್ಬ ತಂದೆ ತಾಯಿಗೆ ಹೇಗಾದರೂ ಮಾಡಿ ಮದುವೆ ಮಾಡಿ ಕೈ ತೊಳೆದುಕೊಳ್ಳಬೇಕು ಎನ್ನುವ ಸಂದರ್ಭದಲ್ಲಿ ವರದಕ್ಷಿಣೆ ಅವರಿಗೆ ಮುಳುವಾಗಿರುವುದನ್ನು ಗಮನಿಸಿ ಈ ಮಾತು ಹೇಳಿದ್ದಾರೆ.

**ದೇವದಾಸಿ ಪದ್ಧತಿ**

ಭಾರತೀಯ ಸಮಾಜಿಕ ವ್ಯವಸ್ಥೆಯಲ್ಲಿ ದೇವದಾಸಿ ಪದ್ದತಿಯೂ ಕೂಡ ಒಂದು. ಇದು ಅನಿಷ್ಟ ಪದ್ದತಿಯಾಗಿದ್ದು ಹೆಣ್ಣಿನ ಭಾವನೆಯನ್ನು ಅರ್ಥ ಮಾಡಿಕೊಳ್ಳದೇ ಅವಳಿಗೆ ವಿಧಿಸುವ ಶಿಕ್ಷೆಯ ರೂಪದಲ್ಲಿ ಹಾಳು ಕೊಂಪೆಗೆ ನೂಕುವ ವ್ಯವಸ್ಥೆಯಾಗಿದೆ. ಅಮಾಯಕ ಹೆಣ್ಣನ್ನು ದೇವರ ಹೆಸರಲ್ಲಿ ದೇವಸ್ಥಾನದ ಸೇವಕಿಯರಾಗಿ ಮೇಲ್ವರ್ಗದ ಜನರ ಲೈಂಗಿಕ ಆಸೆಗಳನ್ನು ಈಡೇರಿಸಿಕೊಳ್ಳಲು ಗೊಡ್ಡು ಸಂಪ್ರದಾಯಗಳಂತ ಅನಿಷ್ಟ ಪದ್ದತಿಯ ಕುರಿತು ತತ್ವ ಪದಕಾರರ ಈ ಕೆಳಗಿನಂತೆ ಹೇಳಿದ್ದಾನೆ.

*"ದೇವ ದಾಸಿ ಅಂತ ದೇವರಿಗೆ ಬಿಡುತ್ತಿರಿ ಹೆಣ್ಣು ಮಕ್ಕಳಿಗಾ*

*ಹಡೆದ ತಾಯಿ ತಂದಿ ಹಾದರ ಕಲಿಸಿ ಘಾಳಿಗಿ ಹಾರಿ ಹೋಡೆದಾಂಗ*

*ಗುಂಡು ಕಲಿಗಿ ಚಂದ್ರ ಬಡಿದು ಅಂತಿರಿ ಮನೆ ದೇವರು ಮರ್ಗಿ ದುರ್ಗಿ*

*ಬೇವು ಉಡಗಿ ಬರೆ ಬತ್ತಲೇ ಕುಣಸ್ತಿರಿ ಪ್ರಾಯದ ಹೆಂಗಸರಿಗೆ"*[9]

ಈ ಮೇಲಿನ ತತ್ವ ಪದವನ್ನು ಗ್ರಹಿಸಿದಾಗ ದೇವದಾಸಿ ಆಚರಣೆಯೂ ತಪ್ಪು ಎಂದು ಗೊತ್ತಿದ್ದರೂ ಹೆಣ್ಣು ಹಡೆದ ತಂದೆ ತಾಯಿಗಳು ಸಂಪ್ರದಾಯಕ್ಕೆ ಜೋತು ಬಿದ್ದವರಂತೆ ಅದು ಅವರು ಮಾಡಲೇ ಬೇಕಾದ ವಿದಿಯೆಂಬ ಮನೋಭಾವದಲ್ಲೇ ತಾವು ಹೆತ್ತ ಮಕ್ಕಳನ್ನೇ ಜೋಗತಿಯಾಗಿ ಬಿಡುವುದನ್ನು ಖಂಡಿಸಿರುವುದು ಉತ್ತಮ ಸಾಮಾಜಿಕ ಕಾಳಜಿ ಎಂದು ಪರಿಭಾವಿಸಬಹುದು. ದುಂಡಾದ ಕಲ್ಲಿಗೆ ವಿಭೂತಿ, ಕುಂಕುಮ ಹಚ್ಚಿ ಅಂಧಕಾರದಿಂದ ದುರ್ಗಮ್ಮ, ದ್ಯಾಮಮ್ಮ, ಕಾಳಮ್ಮ, ಕಾಡಮ್ಮ ಎಂಬಿತ್ಯಾದಿ ಹೆಸರುಗಳಿಂದ ಕರೆದು ಅಮಾಯಕ ಹೆಣ್ಣು ಬಾಲೆಯನ್ನು ಬಲವಂತವಾಗಿ ಹಾದರಕ್ಕೆ ತಳ್ಳುವುದು ನಾಚಿಕೆಗೇಡಿನ ಸಂಗತಿ ಅದು ಅನಾಗರಿಕತೆಯ ಲಕ್ಷಣ. ಅದು ಅದು ಅಕ್ಷಮ್ಯ ಅಪರಾಧವಿದ್ದಂತೆ ಹೆಣ್ಣನ್ನು ಯಾವ ದೇವರು ಕೂಡ ಈ ಸಂಪ್ರದಾಯವನ್ನು ಮಾಡು ಎನ್ನುವದಿಲ್ಲ ಎಂಬ ಮಾತು ಇಲ್ಲಿದೆ.

**ಆಧ್ಯಾತ್ಮಿಕ ಆಯಾಮಗಳು**

ಕನ್ನಡ ಸಾಹಿತ್ಯದಲ್ಲಿ ಅನುಭಾವ ಸಾಹಿತ್ಯಕ್ಕೆ ತನ್ನದೇ ಆದ ಪರಂಪರೆಯಿದೆ. ಆ ಪರಂಪರೆಯೂ

ಮುಂದುವರೆಯುತ್ತಾ ಅನುಭಾವ ಕವಿಗಳು, ಶರಣ, ಸೂಫಿಗಳ ಪ್ರಭಾವದಿಂದ ಆಧ್ಯಾತ್ಮಿಕ ಜೀವನದ ಕುರಿತು ತಮ್ಮ ನಿಲುವುಗಳು, ಅಂಕುಡೊಂಕುಗಳನ್ನು ತಿದ್ದಿ ತೀಡಿ ಸರಿದಾರಿಗೆ ತರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಅದು ಆಧ್ಯಾತ್ಮದೆಡೆಗೆ ಪ್ರೇರಣೆಗೊಂಡಿತು. ಕೆಲವು ಜನ ಲೌಕಿಕ ಬದುಕಿನಿಂದ ತಮ್ಮ ಜೀವನದಲ್ಲಿ ವೈರಾಗ್ಯವನ್ನು ಕಂಡುಕೊಂಡು ಅದನ್ನು ತಿರಸ್ಕರಿಸಿ ಆಧ್ಯಾತ್ಮದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಇದು ಮುಕ್ತಿಗೆ ದಾರಿ ಮಾಡಿಕೊಡುತ್ತದೆ. ಬದುಕಿನ ಜಂಜಾಡಗಳಿಂದ ಮುಕ್ತರಾಗಲು ವೈರಾಗ್ಯ ಹೊಂದಿ ಅಲೌಕಿಕ ಬದುಕಿನ ಕಡೆಗೆ ಹೋಗಲು ಸಾಂಸಾರಿಕ ಬದುಕನ್ನು ಮೀರಿ ಯೋಗ, ತಪಸ್ಸು, ಧ್ಯಾನ, ಆಧ್ಯಾತ್ಮ ಇದನ್ನು ಚಿತ್ತ ಮನಸ್ಸಿನಿಂದ ಅದೇ ಮಾರ್ಗದಲ್ಲಿ ಹೋದರೆ ಮುಕ್ತಿಗೆ ದಾರಿಯಿದೆ ಎಂಬ ನಂಬಿಕೆ. ಇವೆಲ್ಲವನ್ನು ಗಮನಿಸಿದಾಗ ಒಂದೇ ಜೀವನ ನೆಲೆಯನ್ನು ಯಾವ ತತ್ವ ಪದಕಾರರು ಹೊಂದಿಲ್ಲ. ಕೆಲವು ಜನ ಲೌಕಿಕ ಬದುಕಿನಲ್ಲಿ ಉಳಿದರೆ ಇನ್ನು ಕೆಲವರು ಪ್ರಾಪಂಚಿಕ ಸುಖಗಳಿಂದ ದೂರ ಉಳಿದು ಸನ್ಯಾಸದ ಬದುಕನ್ನು ಬಯಸಿದವರಾಗಿದ್ದಾರೆ. ಇದಕ್ಕೆ ಮೀರಿ ಕೆಲವು ಜನ ಅನುಭಾವಿಗಳು ಮಹಾಂತ ಶಿವಯೋಗಿ, ಷಡಕ್ಷರಿ, ನಿಜಗುಣ ಯೋಗಿಗಳು ಆಧ್ಯಾತ್ಮದ ಬಗ್ಗೆ ಒಲವು ಉಳ್ಳವರಾಗಿದ್ದರು.

ಯಂಕಮ್ಮ ಅವರು ಹೇಳುವಂತೆ "ಜೀವನದಲ್ಲಿ ಜೀವನದ ಪಯಣಕ್ಕೆ ಅಡ್ಡಿಯಾಗಿ ಬಂದ ಬಡತನವನ್ನು ಎದುರಿಸಲು ಸಾಧ್ಯವಾಗದೇ ಇದರಿಂದ ಮುಕ್ತಿಯನ್ನು ಬಯಸಿದವರು. ಸಂಸಾರ ಸಾಗರದಿಂದ ದೂರವಾದವರು. ಇದರಲ್ಲಿ ಎಷ್ಟೇ ಈಜಾಡಿ ಬದುಕಿದರೂ ಅದು ಬರೀ ಕ್ಷಣಿಕ ಮಾತ್ರ ಎಂಬುದನ್ನು ಅರಿತು ಇಂಥ ಸುಖದಿಂದ ಸಂಪೂರ್ಣವಾಗಿ ಮುಕ್ತಿಯನ್ನು ಹೊಂದಬೇಕೆಂದು ಮಾನಸಿಕವಾಗಿ ಅಂತರಾತ್ಮದಿಂದ ಹಂಬಲಿಸಿ ಆಧ್ಯಾತ್ಮದ ಹಾದಿ ಹಿಡಿದವರು. ಅದರಲ್ಲಿ ಶಾಶ್ವತ ಮುಕ್ತಿಯಿದೆ ಎಂದು ಅರ್ಥೈಸಿಕೊಂಡವರು."[9]

ತತ್ವಪದಕಾರರು ಆಧ್ಯಾತ್ಮಿಕ ವ್ಯವಸ್ಥೆಯನ್ನು ಹಾದರ ಮಾಡುವುದು, ಗಾಂಜಾ ಸೇದುವುದು ಇವುಗಳಿಂದ ಅನುಭವದ ನೆಲೆಯನ್ನು ಗ್ರಹಿಸಲು ಬಳಸುತ್ತಾರೆ. ಡಾ. ಅಮರೇಶ ನುಗಡೋಣಿ ಅವರು ಹೇಳುವಂತೆ "ಲೌಕಿಕದ ವ್ಯಾಮೋಹವನ್ನು ಮರೆಯಲು ಸ್ವತಃ ಗುರುವೇ ಶಿಷ್ಯನಿಗೆ ಗಾಂಜಾ ಕೊಡುವ ಸಂಪ್ರದಾಯವಿದೆ. ಸಾಧನೆಯ ಆದಿ ಹಿಡಿಯಲು ಬೇಕಾಗುವ ಪರವಶಕ್ಕಾಗಿ ಇದು ಆರಂಭದಲ್ಲಿ ಅಗತ್ಯವೆಂಬುದು ನಿಜ. ಆದರೆ ನಿಜವಾದ ಸಾಧಕನು ತಮಗೆ ಬೇಕಾಗುವ ಪರವಶವನ್ನು ಧ್ಯಾನ, ಯೋಗದಿಂದ ದಕ್ಕಿಸಿಕೊಳ್ಳುತ್ತಾರೆ."[11]

***"ಸೇದೋ ಸೇದೋ ಗಾಂಜಿಯ। ಸಾಧು ನೀನಾಗೋ ಸೇದೋ***

***ಸೇದೋ ಸೇದೋ ಗಾಂಜಿ। ಆದಿ ಅಂತ್ಯವ ಭಾಗಿಸಿ***

***ಸಂಗಾ ಸುಸ್ಸಂಗಾ ನಿಸ್ಸಂಗಾ। ಜುಂಜುರಿಸುತ್ತೋ ಸೇದೋ***

***ಓದಿವಾದಿ ಮಾಡಲಿ ಬ್ಯಾಡಾ। ಹೋಗುವ ಹಾದಿಯ ನೋಲತೋ***

***ನಾದ ಬಿಂದು ಖಳೆ ಬೇಧಿಸಿ। ಸಾಧು ಲೆಕ್ಕಿ ಸೇದೋ ಸೇದೋ"[12]***

ಮನಸ್ಸಿನ ಸ್ವಪ್ನಾವಸ್ಥೆಯಿಂದ ಕಲ್ಪಿತವಾಗಿದ್ದು ಈ ಗಾಂಜಾ ಆದಿ ಅಂತ್ಯದ ಬಗೆಗೆ ಹೇಳುವಾಗ ಆದಿ ಅಂತ್ಯ ಎಂಬುವಲ್ಲಿ ಗಾಂಜಾವನ್ನು ಸೇದಿದಾಗ ಒಳಗಡೆ ಎಳೆದುಕೊಂಡಿರುವ ಅಂಶ ಒಳಗಡೆ ಹಾಗೆ ನಿಯಂತ್ರಿಸುವುದು. ಇಲ್ಲಿ ಅಂತರಾತ್ಮದೊಳಗೆ ಜಾಗೃತಿಯನ್ನು ಇಟ್ಟುಕೊಳ್ಳುವುದು.

ಸಾಧಕನು ಸಾಧಿಸಲು ಅಷ್ಟು ಸುಲಭವಲ್ಲ. ಅದು ಲೌಕಿಕ ವ್ಯಾಮೋಹವನ್ನು ಬಿಡಲು ಅವನು ತ್ಯಾಗಿಯಾಗಲು ಬಹಳ ಶ್ರಮಬೇಕಾಗುತ್ತದೆ. ಲೌಕಿಕ ಬದುಕಿನಲ್ಲಿ ಈಜಿದ ವ್ಯಕ್ತಿಗೆ ಅದು ಕಬ್ಬಿಣದ ಕಡಲೆಯಂತೆ ಎನ್ನುತ್ತಾರೆ ಕೆಲವರು. ಏನೇ ಇದ್ದರೂ ಲೌಕಿಕ ವ್ಯಾಮೋಹವನ್ನು ಮರೆಯಲು ಅಗತ್ಯವಾಗಿ ಗಾಂಜಾ ಬೇಕೇ ಬೇಕು ಎನ್ನಬಹುದು. ಶಿಶುನಾಳ

ಶರೀಫರ ಕಾರ್ಯಕ್ಷೇತ್ರಕ್ಕೆ ಹೋದ ಸಂದರ್ಭದಲ್ಲಿ ಒಬ್ಬ ಸಾಧುವನ್ನು ನಾನು ಸಂದರ್ಶಿಸಿ ಗಾಂಜಾದ ಬಗೆಗೆ ಕೇಳುವಾಗ ಅದಕ್ಕೆ ಅವನಿತ್ತ ಉತ್ತರ ಮುಶಿಯನ್ನ ಕೈಗೆ ಕೊಟ್ಟು ಕೊನೆಗೆ ಒಂದು ಜುರಿ ಎಳೆಸಿದ ಅದರ ಪರಿಣಾಮ ಯಾವ ಹೊತ್ತು ಸೇವನೆ ಮಾಡಿದ್ದೇನೋ ಅದೇ ಸಮಯಕ್ಕೆ ಎಚ್ಚರವಾಗಿದ್ದೆ ಎಂದು ನನ್ನ ಜೊತೆಗೆ ಬಂದವರು, ಆ ಸಾಧು ಹೇಳಿದ್ದು, ಇಡೀ ಸಮಯ ನನ್ನ ವರ್ತನೆಗಳು ಅಲೌಕಿಕದ ಕಡೆಗೆ ವಾಲಿದ್ದವು. ಅವರ ಹೇಳಿಕೆ ಬೆರಗನ್ನುಂಟು ಮಾಡಿತ್ತು. ಇವರದು ಸಮಾಜದಲ್ಲಿ ದೊಡ್ಡ ಗುಂಪಿದೆ.

**ಹಾದರದ ಪರಿ**

ತತ್ವಪದಕಾರರು 'ಹಾದರ' ಎಂಬ ಪದವನ್ನು ಸತಿ ಪತಿಭಾವದ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕರೆದಿದ್ದಾರೆ. ಲೌಕಿಕ ನೆಲೆಯಲ್ಲಿ 'ಹಾದರ' ಪದ ಬಳಕೆ ಮಾಡಿದ್ದಾರೆ. ಈ ಪದ ಬಳಕೆ ವಿಶೇಷವಾಗಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಬಳಕೆ ಮಾಡಲಾಗುತ್ತದೆ. ಈ ಪ್ರದೇಶದಲ್ಲಿ ತತ್ವಪದಕಾರರು ಬಳಸಿರುವುದು ಯಾಕೆ? ಎಂದಾಗ ಈ ಪ್ರದೇಶದವರಾಗಿವುದರಿಂದ ಇಲ್ಲಿ ಮಹಿಳೆಯು ಹೆಚ್ಚು ಶೋಷಣೆಗೆ ಒಳಗಾಗಿರುವುದನ್ನು ಕಂಡು ಇಂತಹ ಅನೈತಿಕ ಸಂಬಂಧವನ್ನು ವಿರೋಧಿಸಿ ದೇಸಿ ನೆಲೆಗಟ್ಟಿನಲ್ಲಿ 'ಹಾದರ' ವೆಂಬುದನ್ನು ಬಳಸುವ ಮುಖೇನವಾಗಿ ಜನ ಸಮುದಾಯಗಳನ್ನು ಸರಿ ದಾರಿಗೆ ತರಲು ಪ್ರಯತ್ನಿಸಿದ್ದಾರೆ.

> ***"ಹಾದರ ಮಾಡಿದ್ದೇನೇ ಹೌದು ಎಂಬುವಂತ***
> ***ಹಾದರ ಮಾಡಿದೆನು, ಹಾದರ ಮಾಡಿದೆನು***
> ***ಅರಿಯದವಳು ನಾನು ಸಾಧಗಳ ಸಂಗದಿಂದ ಬೋಧವ ಕೇಳಿ ॥ಪ॥***
> ***ಕುಂಟಲಗಿತ್ತಿ ಕರೆದು ಹೋದಳು ಎನ್ನ ಆತನಿಗೆ ನನಗೆ***
> ***ಗಂಟು ಹಾಕಿದಳು, ಇನ್ನು ಎನ್ನ ವಂಶಕ್ಕೆ***
> ***ಉಂಟು ಮಾಡಿದಳು ನನ್ನ ನಂಟರಾದರೇನು ಕೊಟ್ಟಾನು ಹೊ"***[13]

ಈ ಮೇಲಿನ ತತ್ವ ಪದವು ಲೌಕಿಕ ನೆಲೆಯಲ್ಲಿ ಮೇಲ್ನೋಟಕ್ಕೆ ಕಾಣಿಸುತ್ತದೆ. ಆದರೆ ಅದನ್ನು ಪರಿಪೂರ್ಣವಾಗಿ ಗಮನಿಸಿದಾಗ ಅದು ಅಲೌಕಿಕ ನೆಲೆಯಲ್ಲಿರುವುದು ವಿಶೇಷ. ಪಾರಮಾರ್ಥಿಕ ನೆಲೆಯಲ್ಲಿ ವಿಶಿಷ್ಟ ಅರ್ಥವನ್ನು ಹೊಂದಿದ್ದು ಯಾವ ಕಲ್ಮಶವಿಲ್ಲದ ಭಾವ ಎದ್ದು ಕಾಣುತ್ತದೆ.

ಒಟ್ಟಾರೆಯಾಗಿ ತತ್ವಪದಕಾರರು ಸಾಮಾಜಿಕ ವ್ಯವಸ್ಥೆಯನ್ನು ಕಂಡಂತವರಾಗಿದ್ದರು. ಇವರ ಚಿಂತನಾ ಕ್ರಮವೂ ಸಾಮಾಜಿಕ ಕಟ್ಟ ಕಡೆಯ ಜನ ಸಮುದಾಯಗಳ ಭಿನ್ನ ಸಮಸ್ಯೆಗಳನ್ನು ಕುರಿತುದಾಗಿದ್ದು, ಬದುಕಿನುದ್ದಕ್ಕೂ ಬವಣೆಗಳನ್ನು ಅನುಭವಿಸಿದವರು. ಸಂಸಾರ ಜಂಜಾಟಗಳನ್ನು ಮೀರಿದ ಲೌಕಿಕ ವ್ಯಾಮೋಹದಿಂದ ಅಲೌಕಿಕ ಮಾರ್ಗದೆಡೆಗೆ ಕೊಂಡೊಯ್ಯಲು ಇವರು ಹಾಕಿಕೊಂಡ ದಾರಿಯು ನಿರ್ಧಿಷ್ಟವಾಗಿ ಸಮಾಜಿಕ ವ್ಯವಸ್ಥೆಯ ಅಮಾನವೀಯ ನೆಲೆಗಳ ವಿರುದ್ಧ ಎಂಬುದು ಗಮನಾರ್ಹವಾಗಿದೆ.

**ಕೊನೆಟಿಪ್ಪಣಿಗಳು**


1. ವಿಪ್ಲವಿ. (2011). *ತತ್ವಪದ ಸಾಹಿತ್ಯದ ಭಾಷೆ: ಒಂದು ಅಧ್ಯಯನ. ಪು.65*
2. ಬಸವಲಿಂಗ ಸೊಪ್ಪಿ ಮಠ. (2001). *ಗೂಗಲ್ಲ ಪರಪ್ಪಯ್ಯನ ತತ್ವಪದಗಳು.* ಪು.40
3. ಅಮರೇಶ ನುಗಡೋಣಿ. (1999). *ನುಡಿವ ಬೆಡಗು.* ಪು. 45
4. ಶಿವಾನಂದ ಗುಬ್ಬಣ್ಣನವರ. (1981). *ಬರಕೋ ಪದ ಬರಕೋ.* ಪು.154
5. ನಾಗಭೂಷಣ ಸ್ವಾಮಿ ಓ.ಎಲ್. (2000). *ತತ್ವಪದಗಳು ಪ್ರಾತಿನಿಧಿಕ ಸಂಕಲನ.* ಪು.335
6. ಶಿವಾನಂದ ಗುಬ್ಬಣ್ಣನವರ. (1981). *ಭಲವಾದಿ ಚಂದಪ್ಪನ ಅನುಭಾವ ಪದಗಳು.* ಪು.101

7. ಸರ್ವಮಂಗಳ ಸಕ್ರಿ. (2008). *ರಾಯಚೂರು ಜಿಲ್ಲೆಯ ತತ್ವ ಪದಕಾರರು ಮತ್ತು ಅವರ ಸಾಹಿತ್ಯ.* ಪು.130
8. *ಭವಾನಿರಾವ್ ಚವ್ಹಾಣ ಅವರ ಹಸ್ತ ಪ್ರತಿ.* ಪು.68
9. ಅದೇ. ಪು.38
10. ಯಂಕಮ್ಮ. (2017). ತುಂಗಭದ್ರಾ ನದಿ ಪ್ರಾಂತ್ಯದ ಅನುಭಾವ ಸಾಹಿತ್ಯ. ಅಪ್ರಕಟಿತ ಮಹಾ ಪ್ರಬಂಧ. ಪು. 72
11. ಅಮರೇಶ ನುಗಡೋಣಿ. (1999). *ಪೂರ್ವೋಕ್ತ.* ಪು.42
12. ಸರ್ವಮಂಗಳ ಸಕ್ರಿ. (2008). *ಪೂರ್ವೋಕ್ತ.* ಪು. 127
13. ವಿಪ್ಲವಿ. (2011). *ಪೂರ್ವೋಕ್ತ.* ಪು.86

**ಪರಾಮರ್ಶನ ಗ್ರಂಥಗಳು**


- ಅಮರೇಶ ನುಗಡೋಣಿ. (1999). *ನುಡಿವ ಬೆಡಗು.* ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾಲಯ.
- ಅಮರೇಶ ನುಗಡೋಣಿ. (2014). *ತತ್ವ ಪದ ಸಾಹಿತ್ಯ ಅಧ್ಯಯನ.* ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ.
- ಬಸವಲಿಂಗ ಸೊಪ್ಪಿ ಮಠ. (2017). *ಗೂಗಲ್ಲ ಪರಪ್ಪಯ್ಯನ ತತ್ವಪದಗಳು.*
- ನಾಗಭೂಷಣ ಸ್ವಾಮಿ. ಓ.ಎಲ್. (2000). *ತತ್ವ ಪದಗಳು ಪ್ರಾತಿನಿಧಿಕ ಸಂಕಲನ.* ಕನ್ನಡ ಸಾಹಿತ್ಯ ಅಕಾಡೆಮಿ.
- ಸರ್ವಮಂಗಳ ಸಕ್ರಿ. (2008). *ರಾಯಚೂರು ಜಿಲ್ಲೆಯ ತತ್ವ ಪದಕಾರರು ಮತ್ತು ಅವರ ಸಾಹಿತ್ಯ.* ಅಪ್ರಕಟಿತ ಮಹಾಪ್ರಬಂಧ. ಕನ್ನಡ ವಿಶ್ವವಿದ್ಯಾಲಯ.
- ಶಿವಾನಂದ ಗುಬ್ಬಣ್ಣನವರ. (1981). ಛಲವಾದಿ ಚಂದಪ್ಪನ ಅನುಭಾವ ಪದಗಳು. ಕನ್ನಡ ಸಾಹಿತ್ಯ ಪರಿಷತ್ತು.
- ಶಿವಾನಂದ ಗುಬ್ಬಣ್ಣನವರ. (1981). *ಬರಕೋ ಪದ ಬರಕೋ.* ಕನ್ನಡ ಸಾಹಿತ್ಯ ಪರಿಷತ್.
- ವಿಪ್ಲವಿ. (2011). *ತತ್ವಪದ ಸಾಹಿತ್ಯದ ಭಾಷೆ: ಒಂದು ಅಧ್ಯಯನ.* ಅಪ್ರಕಟಿತ ಮಹಾಪ್ರಬಂಧ. ಕನ್ನಡ ವಿಶ್ವವಿದ್ಯಾಲಯ.